ಫಿನಾರ್ಷಿಯಲ್ ಇಲಾಖಾ.

ಮೈಸೂರ್ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕುಗಳು.

ಘಾತೀ ಪಟ್ಟ ಜನಗಳ ಬಾಬತು 1,000 ರೂಪಾಯಿಗಳಿಗೆ ಮಿಾರಿದ ಡಿಪಾಜಿಟ್ ಮೊಬಲಗು.

ಸರ್ಕ್ಯುಲರ್ ನಂಬರು 1251.

ತಾರೀಖು 18ನೇ ಫಿಬ್ರವರೀ 1876.

ಇಂಡ್ಯ ಗವರ್ಮೆಂಟ್ ಫಿನಾರ್ಷಿಯಲ್ ಇಲಾಖೆಯವರು ಈ ಕೆಳಗೆ ನಮೂದಿಸಲ್ಪಡುವ ಸಂಗತಿಯನ್ನು ದರೋಬಸ್ತು ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕುಗಳಿಗೂ ತಿಳಿಯಪಡಿಸಬೇಕೆಂತ ತಮ್ಮ 1876ನೇ ಇಸವಿ ಫಿಬ್ರವರೀ 9ನೇಮರ್ತುಂ 753ನೇ ನಂಬರ್ ಹುಕ್ತುಮಿನಲ್ಲಿ ಆವೇಕ್ಷಿಸಿರುತ್ತಾರೆಂತ, ಮೈಸೂರ ಪ್ರಾಂತ್ಯದಲ್ಲಿ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕುಗಳ ಇನ್‌ಚಾರ್ಜ್ ಡೆಪ್ಯುಟಿ ಕಮ್ಮಿಷನರ್‌ಯವರಿಗೂ, ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸರರಿಗೂ, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್‌ಯವರು ತಿಳಿಯಪಡಿಸುತ್ತಾರೆ.

2. ಸ್ ೧೮೬೮ನೇ ಇಸವಿಯಲ್ಲಿ ಉಯಿಲು ಬರಿಯದೆ ಮೃತಪಟ್ಟ ಒಬ್ಬ ಕಮ್ಮಿಷನೆಡ್ ಮಿಲಿಟೆರಿ ಆಫಿಸರು ತನ್ನ ಮರಣಕಾಲದಲ್ಲಿ ಬಂದಾನೊಂದು ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕಿನೊಳಗೆ 1,000 ರೂಪಾಯಿಗಳಿಗೆ ಮೇಲ್ಪಟ್ಟ ಬಂದು ಮೊಬಲಗನ್ನು ಇಟ್ಟು ಹೋದನು. ಸ್ ೧೮೬೩ನೇ ಇಸವಿಯ ರಜಿಮೆಂಟಲ್ ಡೆಟ್ಸ್ ಆಕ್ಟ್ ಯಂಬ ಆಕ್ಟಿನ ನಿಬಂಧನೆಗಳನುಸರಿಸಿ ಸದರೀ ಮೃತಪಟ್ಟವನ ಕೆಲಸಗಳನ್ನು ವ್ಯವಸ್ಥೆಮಾಡುವದಕ್ಕೋಸ್ಕರ ಮೊಕರರಾದ ಅಡಿಜಸ್ಟ್‌ಮೆಂಟ್ ಕಮ್ಮಿಟ್ಟಿಯ ಪ್ರಸಿಡೆಂಟರು ಕೇಳಿಕೊಂಡದ್ದರ ಮೇಲೆ ಸದರೀ ಮೊಬಲಗು ಸ್ ೧೮೬೯ನೇ ಇಸವಿ ಜನವರೀ ತಿಂಗಳಲ್ಲಿ ಬ್ಯಾಂಕಿನವರಿಂದ ಸದರೀ ಪ್ರಸಿಡೆಂಟರಿಗೆ ಕಳುಹಿಸಲ್ಪಟ್ಟಿತು, ಮತ್ತು ಮಿಲಿಟೆರಿ ಇಲಾಖೆಯಲ್ಲಿ ಗವರ್ಮೆಂಟ್ ಸೆಕ್ರಿಟೆರಿ ಹುಕ್ತುಂ ಬವೋಜೀಬ್ ಸದರೀ ಪ್ರಸಿಡೆಂಟರು ಕೇಳಿಕ್ಕೊಂಡ ಪ್ರಕಾರ ಮೃತಪಟ್ಟವನ ಹೆಂಡತಿಗೆ ಉತ್ತರೋತ್ತರ ಪಾವತೀ ಮಾಡಲ್ಪಟ್ಟಿತು.

3. ಸದರೀ ಮೃತಪಟ್ಟ ಆಫಿಸರಿಗೆ ಒಬ್ಬ ಮಗಳಿದ್ದಳು, ಅವಳು ಸಹಾ ಒಂದು ಹೆಂಣುವಮಗುವನ್ನು ಬಿಟ್ಟು ಮೃತಪಟ್ಟಳು, ಆ ಹೆಂಣು ಮಗುವಿಗೆ ವಯಸ್ಸು ಬಂದ ಮೇಲೆ ಅವಳು ಘಾತೀಯಾದ ತನ್ನ ತಾತನ ಸ್ವತ್ತಿಗೆ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷ್ಣ ಯಂಬ ಸರಟಿಫಿಕೇಟ್ ಪಡೆಕೊಂಡವಳಾಗಿ ಅವನು ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟಿದ್ದ ಮೊಬಲಗು ತನಿಗೆ ಸಲ್ಲಬೇಕೆಂತ ದಾವೆ ಮಾಡಿದಳು.

ಇಂಡ್ಯ ಗವರ್ಮೆಂಟಿನವರು ಸದರೀ ದಾವೆಯನ್ನು ಅಂಗೀಕರಿಸಿ ಸದರೀ ವ್ಯವಸ್ಥೆಯ ಕಮ್ಮಿಟ್ಟಿಯ ಪ್ರಸಿಡೆಂಟರಿಗೆ ಸೇವಿಂಗ್ಸ್ ಬ್ಯಾಂಕಿನವರು ಮೊಬಲಗು ಸಂದಾಯ ಮಾಡಿದ್ದು ನ್ಯಾಯವಲ್ಲವೆಂದು ನಿರ್ಣಯಿಸಿದರು.

ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್‌ಯವರು ಪ್ರಾರ್ಥಿಸುವದೇನಂದರೆ, ಮೈಸೂರು ಶೀಮೆಯಲ್ಲಿರುವ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕುಗಳ ಇನ್‌ಚಾರ್ಜ್ ಆಫಿಸರ್‌ಗಳು ಈ ಸಂಗತಿ ವಿಷಯದಲ್ಲಿ, ಸ್ ೧೮೭೩ನೇ ಇಸವಿ ಜುಲೈ 29ನೇ ಮರ್ತುಂ 1027ನೇ ನಂಬರ್ ಉಳ್ಳ ತಮ್ಮ ಸರ್ಕ್ಯುಲರಿಗೂ, ಯಾವ ಆಕ್ಟಿನ ನಿಬಂಧನೆಗಳು ಮೈಸೂರ ಶೀಮೆಗೆ ಲಗಾವಾಗಿರುತ್ತವೋ ಅಂತಾ 1873ನೇ ಇಸವಿ 5ನೇ ನಂಬರ್ ಬಗೆ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕ್ ಆಕ್ಟಿಗೂ ಅಂದರೆ, ಘಾತೀಪಟ್ಟವರ ಸ್ವತ್ತಿಗೆ ಸಂಬಂಧಿಸಿದ ಡಿಪಾಜಿಟ್‌ಗಳನ್ನು ಕುರಿತ 4ರ ಲಾಗಾಯತು 9ರ ವರಿಗೆ ಇರತಕ್ಕ ಸೆಕ್ಷ್ಯನ್‌ಗಳಿಗೆ ನಿಗೇಕೊಡತಕ್ಕದ್ದು. ಸದರೀ ಆಕ್ಟು, 1,000 ರೂಪಾಯಿಗೆ ಮಿಾರಿದ ಮೊಬಲಗ್ ಕೊಡತಕ್ಕ ಬಗ್ಗೆ ಬಂದು ನಿಬಂಧನೆಯನ್ನು ಕಂಡತಃ ತಿಳಿಸುವದಿಲ್ಲವು, ಆದರೆ ಘಾತೀಯಾದವರ ಸ್ವತ್ತುಗಳಿಗೆ ಪಾರಂಪರ್ಯವನ್ನು ಕ್ರಮ ಪಡಿಸುವ ಬಗ್ಗೆ ಆಗಿಂದಾಗ್ಗೆ ಜಾರೀಯಲ್ಲಿ ಬರುವ ಕಾನೂನಿನ ನಿಬಂಧನೆಗಳನುಸರಿಸಿ ಘಾತೀಪಟ್ಟ ಡಿಪಾಜಿಟರ್‌ಗಳ ವಾರಸ್‌ದಾರರಿಗೆ ಸದರೀ ಮೊಬಲಗ್‌ಗಳು ಸಲ್ಲತಕ್ಕದ್ದೆಂಬದಾಗಿ, ಈ ಮಾರ್ಜಿನಲ್ಲಿ ಕಂಡ ಹುಕ್ತುಮಿನ 15ನೇ ಕಲಂನಲ್ಲಿ ಮೊದಲೇ ಸೂಚಿಸಿಇದ್ದೆ.

ಇಂಡ್ಯ ಗವರ್ಮೆಂಟ್ ಫಿನಾರ್ಷಿಯಲ್ ಇಲಾಖಾ ಇಸ್ತಿಹಾರ್‌ನಾಮೆ ನಂ॥ 167—1, ತಾ॥16ನೇ ಮೇ 1870 ಕಲಂ15,1870ನೇ ಆಗಸ್ಟು 20ನೇ ಮರ್ತುಮಿನ ಮೈಸೂರು ಗೆಜೆಟ್ ಸಪ್ಲಿಮೆಂಟು.

ದರೋಬಸ್ತು ಬಿಲ್‌ಗಳ, ರಸೀದಿವಗೈರೇಗಳ, ಒಟ್ಟು ತೇರೀಜುಗಳು ಅಕ್ಷರಗಳಲ್ಲಿಯೂ ಅಂಕೆಯಲ್ಲಿಯೂ ಒರಿಯಲ್ಪಡತಕ್ಕ ಅಂಶ.

ಸರ್ಕ್ಯುಲರ್ ನಂಬರ್ 1252, ತಾರೀಖು 19ನೇ ಫಿಬ್ರವರೀ 1876.

ಡೆಪ್ಯುಟಿ ಆಕ್ಕೌಂಟೆಂಟ್ ಜನರಲ್‌ಯವರು ಕೋರುವದೇನಂದರೆ, ಬಿಲ್‌ಗಳು, ರಸೀದಿಗಳು, ಯಾ ಬರಾವರ್ದುಗಳು, ತಲಬು, ಅಲ್ಲೌನ್ಸ್, ಲವಾಜಮಾ, ಸಾದಿಲ್ವಾರ್ ಖರ್ಚುಗಳು, ಈ ಬಗ್ಯಾಗಿರಲಿ ಇನ್ಯಾವ ಖರ್ಚುಬಾಬು ಬಗ್ಯಾಗಿರಲಿ ಪರಂತು ಅವುಗಳಿಗೆ ರುಜೂ ಮಾಡುವ ಸರಕ್ಕಾರ್ ಆಫಿಸರ್‌ಗಳು ಸದರೀ ಬಿಲ್ಲು ವಗೈರೇಗಳಲ್ಲಿ ಟೋಟಲ್ ಯಾನೇ ತೇರೀಜು ಅಕ್ಷರಗಳಲ್ಲಿಯೂ ಅಂಕೆಗಳಲ್ಲಿಯೂ ಬರೆದಿರುತೆಂತಾ ಜಾಗರೂಕತೆಯಿಂದ ನೋಡತಕ್ಕದ್ದಲ್ಲದೆ ಅಂತಾ ತೇರೀಜಿನಲ್ಲಿ ಯಾವ ಅಂಕೆಯಾಗಲಿ ಹೆರಿಯಲ್ಪಟ್ಟಿದ್ದರೆ ಆಥವಾ ತಿದ್ದಲ್ಪಟ್ಟಿದ್ದರೆ ಅಂತಾವುಗಳನ್ನು ತಮ್ಮ ಚಿಕ್ಕ ರುಜೂಮೂಲಕ ಧೃಢಪಡಿಸತಕ್ಕದ್ದಾಗಿರುತ್ತೆ.

H. HUDSON,
Dy. Acctt. General in Mysore.

ಫಾರೆಸ್ಟ್ಸ್ ಇಲಾಖಾ.

ತಾರೀಖು 10ನೇ ಜನವರೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ನಗರ ಡಿವೀಜ್ ಬಾಬತು ಈ ಕೆಳಗೆ ಬರುವ ತೇಗದ ವ ಇತರ ಮರಗಳ ದಿಮ್ಮೀಗಳು ಯಿದರಡಿ ತಿಳಿಸಲ್ಪಟ್ಟ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಡಿಪೋ ಹೆಸರು	ಹರಾಜ್ ತಾರೀಖು	ತೇಗದ ಮರ	ಬೀಟೀಮರ	ಜಂಗ್ಲೀಮರ	ತೇಗದ ಕೂಚಗಳು	ಜಂಗ್ಲೀಮರದ ಕೂಚಗಳು	ಜುಮ್ಲಾ.
ಷಿಕಾರಿಪುರ ತಾಲ್ಲೂಕಿನಲ್ಲಿರುವ ಷಿಕಾರಿಪುರದ ಡಿಪೋ	15ನೇ ಮಾರ್ಚೀ 1876.	959	633	408	265	57	2,322
ಷಿಕಾರಿಪುರ ತಾಲ್ಲೂಕಿನಲ್ಲಿರುವ ಶಿರಾಳ ಕೊಪ್ಪದ ಡಿಪೋ	25ನೇ ಮಾರ್ಚೀ 1876.	129	162	574	37	43	945
ಜುಮ್ಲಾ.		1,088	795	982	302	100	3,267

ಹರಾಜ್ ನಿಬಂಧನೆಗಳು.

1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟ್ ಇಸ್ತಿಹಾರ್ ಪ್ರಕಾರ.

ಷಿಕಾರಿಪುರದಲ್ಲಿರುವ ತಾಲ್ಲೂಕು ಖಜಾನೇಯಲ್ಲಿ ಮೊಬಲಗ್ ಪಾವತೀಮಾಡತಕ್ಕದ್ದು, ಖರೀದಿ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿ ಪ್ರಕಾರ ಐಜ್ ಖಜಾನೇಯಲ್ಲಿ ಪಾವತೀಮಾಡಿ ಆಬಜ್ಯೆ ಪಡೆದ ರೀದಿಯನ್ನು ಹರಾಜುನಡಿಸುವ ಆಫಿಸರರಿಗೆ ಹರಾಜು ತಾರೀಖು ಲಾಗಾಯತು ಐದನೇದಿನ ಸಾಯಂಕಾಲಕ್ಕೆ ಪೂರ್ವ ಕೊಡತಕ್ಕದ್ದು.

ಹರಾಜ್ ತಾರೀಖು ಲಾಗಾಯತು 6ನೇ ದಿನ ಹಣ ಪಾವತೀ ಮಾಡುವದಕ್ಕೆ ತಪ್ಪಿದವರ ಮರವನ್ನು ಪುನಃ ಮಾರಲಿಕ್ಕೆ ಪ್ರತಿ ಡಿಪೋಯಲ್ಲಿಯೂ ಯರಡನೇ ಹರಾಜ್ ನಡಿಸಲ್ಪಡುವದು.

ತಾರೀಖು 3ನೇ ಫಿಬ್ರವರೀ 1876.

ಇದರಿಂದ ತಿಳಿಸಲ್ಪಡುವದೇನಂದರೆ, ಕೊಡಗು ಶೀಮೇ ಉತ್ಪತ್ತಿ ಬಾಬತು ಈ ಕೆಳಗೆ ನಮೂದಿಸಲ್ಪಡುವ ತೇಗಿನ ವ ಯಿತರ ಮರಗಳ ದಿಮ್ಮೀಗಳು, ಯಿದರಡಿ ತಿಳಿಸಲ್ಪಟ್ಟ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.